# ಹಿರಿಯ ಶ್ರೇಣಿ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.

**CC No. 580/2022**

**PW-1 CW-1**

| | | |
|---|---|---|
| ಸಾಕ್ಷಿದಾರನ ಹೆಸರು | : | ದೇವರಡ್ಡಿ ತಂದೆ ಸಿದ್ರಾಮಪ್ಪ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ಕಂದಾಯ ನಿರೀಕ್ಷಕರು ಜಾಲಹಳ್ಳಿ |
| ವಾಸಸ್ಥಳ | : | ದೇವದುರ್ಗ |
| ಪ್ರಮಾಣೀಕರಿಸಿದ ದಿನಾಂಕ | : | 24-10-2024 |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

ನಾನು ದಿನಾಂಕ 12-07-2018 ಕಂದಾಯ ನಿರೀಕ್ಷಕರು ಜಾಲಹಳ್ಳಿ ಎಂದು ಈವರೆಗೆ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಜಾಲಹಳ್ಳಿ ಹೋಬಳಿಯ ನಾಗಲಾಪೂರ ಗ್ರಾಮದ ಸರ್ವೆ ನಂಬರ 20 ಕ್ಷೇತ್ರ 297 ಎಕರೆ 19 ಗುಂಟೆ ಹಾಗೂ ಸರ್ವೆ ನಂಬರ 32 ಕ್ಷೇತ್ರ 99 ಎಕರೆ 38 ಗುಂಟೆ ಎರಡು ಜಮೀನುಗಳು ಸರಕಾರಿ ಜಮೀನುಗಳು ಆಗಿರುತ್ತವೆ. ಸರ್ವೆ ನಂಬರ 20 ಪರಂಪೋಕ ಹಾಗೂ ಸರ್ವೆ ನಂಬರ 32 ಗೈರಾಣು ಆಗಿರುತ್ತದೆ. 06 ಜನ ರೈತರು ಸರ್ವೆ ನಂಬರ 20 ಮತ್ತು 32 ರಲ್ಲಿ ಅತೀಕ್ರಮ ಮಾಡಿ ಸಾಗುವಳಿ ಮಾಡುತ್ತಿದ್ದರು. ದಿನಾಂಕ 22-06-2022 ರಂದು ನಾನು, ಗ್ರಾಮಲೆಕ್ಕಾಧಿಕಾರಿಯಾದ ಮಹಿಬೂಬ ಹಾಗೂ ಗ್ರಾಮ ಸಹಾಯಕರಾದ ರಾಚಣ್ಣ ಮತ್ತು ರಂಗನಾಥ ಸೇರಿಕೊಂಡು ನಾಗಲಾಪೂರ ಗ್ರಾಮಕ್ಕೆ ಹೋಗಿ ಸದರಿ 06 ಜನರಿಗೆ ಸರಕಾರಿ ಜಮೀನು ಒತ್ತುವರಿ ಮಾಡಬಾರದು ಎಂದು ತಿಳುವಳಿಕೆ ಹೇಳಿ ದಿನಾಂಕ 01-07-2022 ರ ಒಳಗಾಗಿ ಜಮೀನನ್ನು ತೆರವುಗೊಳಿಸುವಂತೆ ಕಾಲಾವಕಾಶ ನೀಡಿರುತ್ತೇವೆ. ಸದರಿ ಜನರು ಕಾಲಮಿತಿಯ ಒಳಗೆ ತೆರವುಗೊಳಿಸದೇ ಇರುವುದರಿಂದ ದಿನಾಂಕ 04-07-2022 ರಂದು ಜಾಲಹಳ್ಳಿ ಪೊಲೀಸ ಠಾಣೆಯಲ್ಲಿ ಪ್ರಕರಣ ದಾಖಲಿಸಿರುತ್ತೇವೆ. ಸದರಿ ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ 06 ಜನ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ ಆದರೆ ಅವರ ಹೆಸರುಗಳನ್ನು ಹೇಳಲು ಬರುವುದಿಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್.ಎಮ್.ಆರ್ ವಕೀಲರಿಂದ.**

ಪರಂಪೋಕ ಮತ್ತು ಗೈರಾಣು ಎರಡು ಬೇರೆ ಬೇರೆ ಜಮೀನುಗಳು ಎಂದರೆ ಸರಿ. ಪರಂಪೋಕ ಜಮೀನು ಎಂದರೆ ಗುಡ್ಡಗಾಡು ಇದ್ದು ಸಾಗುವಳಿ ಮಾಡಲು ಬರುವುದಿಲ್ಲ ಎಂದರೆ ಸರಿ. ಸಾಗುವಳಿ ಮಾಡದೇ ಇರುವ ಗುಡ್ಡಗಾಡು ಜಮೀನು ಅರಣ್ಯ ಇಲಾಖೆಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ಗೈರಾಣು ಜಾಗ ಎಂದರೆ ಸಾಗುವಳಿ ಇಲ್ಲದೇ ಇರುವ ಜಾಗ ಎಂದರೆ ಸರಿ. ಪರಂಪೋಕ ಮತ್ತು

ಗೈರಾಣು ಜಮೀನುಗಳು ಸಾಗುವಳಿ ಜಮೀನುಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 25-06-2022 ರಂದು ಸದರಿ ಜಮೀನುಗಳ ಕುರಿತು ತಹಸೀಲ್ದಾರ ದೇವದುರ್ಗ ಇವರಿಗೆ ಪತ್ರವನ್ನು ನೀಡಿರುತ್ತೇವೆ. ತಹಸೀಲ್ದಾರ ರವರಿಗೆ ನೀಡಿರುವ ದಿನಾಂಕ 25-06-2022 ರ ಪಂಚನಾಮೆಯಲ್ಲಿ 19 ಜನರನ್ನು ತೋರಿಸಲಾಗಿದೆ ಎಂದರೆ ಸರಿ. ಸದರಿ 19 ಜನರ ವಿಳಾಸದ ಕುರಿತು ಅವರಿಂದ ಗುರುತಿನ ಚೀಟಿ ಪಡೆದಿಲ್ಲ. ಸದರಿ 19 ಜನರ ಹೆಸರು ನನಗೆ ಹೇಳಲು ಬರುವುದಿಲ್ಲ. ದಿನಾಂಕ 14-09-2021 ರಂದು ಪಂಚನಾಮೆಗಳನ್ನು ಮಾಡಿರುತ್ತಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ದಿನಾಂಕದಂದು ಸರಕಾರಿ ಜಮೀನುಗಳಲ್ಲಿ ಒತ್ತುವರಿ ಮಾಡಬಾರದು ಎಂದು ನಾಮಫಲಕ ಅಳವಡಿಸಿರುತ್ತೇವೆ ಎಂದು ನುಡಿಯುತ್ತಾರೆ. ಸರ್ವೆ ನಂಬರ 20 ಮತ್ತು 32 ರ ಪಹಣಿಗಳನ್ನು ದೂರಿನೊಂದಿಗೆ ಪೊಲೀಸರಿಗೆ ನೀಡಿರುತ್ತೇನೆ. ಸರ್ವೆ ನಂಬರ 20 ಪೊಲೀಸರಿಗೆ ನೀಡಿದ ಪಹಣಿಯಲ್ಲಿ 319 ಎಕರೆ 11 ಗುಂಟೆ ಎಂದು ನಮೂದಿಸಲಾಗಿದೆ ಎಂದರೆ ಸರಿ ಹಾಗೂ ಸರ್ವೆ ನಂಬರ 32 ರಲ್ಲಿ 110 ಎಕರೆ ಎಂದು ನಮೂದಿಸಲಾಗಿದೆ ಎಂದರೆ ಸರಿ. ಈ ಪ್ರಕರಣದಲ್ಲಿ ಸರ್ವೆ ನಂಬರ 20 ಮತ್ತು 32 ರ ಪಹಣಿಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 29-06-1993 ರ ಮುಟೇಶನ್ ನಂ.20 ರ ಮೂಲಕ ಮೈಸೂರು ಖನಿಜ ಸಂಸ್ಥೆಗೆ 600 ಎಕರೆ ಗುತ್ತಿಗೆ ನೀಡಲಾಗಿದೆ ಎಂದು ಸರ್ವೆ ನಂಬರ 20 ರ ಪಹಣಿಯಲ್ಲಿ ನಮೂದಿಸಲಾಗಿದೆ ಎಂದರೆ ಸರಿ. ದಿನಾಂಕ 29-06-1993 ರ ಮುಟೇಶನ್ ನಂ.20 ರ ಮೂಲಕ ಮೈಸೂರು ಖನಿಜ ಸಂಸ್ಥೆಗೆ 7 ಎಕರೆ ಗುತ್ತಿಗೆ ನೀಡಲಾಗಿದೆ ಎಂದು ಸರ್ವೆ ನಂಬರ 32 ರ ಪಹಣಿಯಲ್ಲಿ ನಮೂದಿಸಲಾಗಿದೆ ಎಂದರೆ ಸರಿ. ಸದರಿ ಎರಡು ಜಮೀನುಗಳು ಮೈಸೂರು ಖನಿಜ ಸಂಸ್ಥೆಗೆ ನೀಡಿದ ಜಮೀನುಗಳು ಆಗಿರುತ್ತವೆ ನನಗೆ ಗೊತ್ತಿಲ್ಲ. ಮೈಸೂರು ಖನಿಜ ಸಂಸ್ಥೆಗೆ ಗುತ್ತಿಗೆ ನೀಡಿರುವ ವಿಚಾರ ಕಂದಾಯ ನಿರೀಕ್ಷಕರಾಗಿದ್ದರಿಂದ ನನಗೆ ಗೊತ್ತಿದ್ದರೂ ಕೂಡ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗುತ್ತಿಗೆ ನೀಡಿದ್ದರಿಂದ ಸದರಿ ಗುತ್ತಿಗೆ ನೀಡಿದ ಸ್ವತ್ತುಗಳ ಮೇಲೆ ಕಂದಾಯ ಇಲಾಖೆಗೆ ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿ. ಮೈಸೂರು ಖನಿಜ ಸಂಸ್ಥೆಗೆ ಸಹಾಯ ಮಾಡಲು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರ ಹೆಸರು, ವಿಳಾಸ ಹೇಳಲು ಬರುವುದಿಲ್ಲ. ಆರೋಪಿತರಿಗೂ ಮತ್ತು ಪ್ರಕರಣಕ್ಕೂ ಯಾವುದೇ ರೀತಿಯ ಸಂಬಂಧ ಇರದೇ ಇದ್ದರೂ ಅಧಿಕಾರ ವ್ಯಾಪ್ತಿ ಮೀರಿ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.